‘ಡಿಸೋಜ, ಪ್ರವೀಣ ಕೆಳಕ್ಕೆ ಬಿದ್ದ ಜಾಗವನ್ನ ಹೇಗೆ ಗೊತ್ತು ಮಾಡಿದಿರಿ?’

‘ಏನ್ ಸಾರ್? ಎಂತಹಾ ಪ್ರಶ್ನೆ ಕೇಳ್ತೀರಿ? ದೇಹ ಏನು ಡಾನ್ಸ್ ಮಾಡ್ಕೊಂಡ್ ಬೀಳುತ್ತಾ? ನೇರವಾಗಿ ಕೆಳಗೆ ಬೀಳುತ್ತೆ. ಅದೇ ಆಧಾರದಲ್ಲಿ ಗುರುತು ಮಾಡಿದ್ದೀವಿ. ಇನ್ನೇನಾದ್ರೂ ಕೇಳೋದಿದೆಯಾ?’

‘ಸಿಸಿ ಕ್ಯಾಮೆರಾದ ಸಾಕ್ಷ್ಯವೇನಾದರೂ ದೊರಕಿದೆಯೇ?’ ನಾನು ಪ್ರಶ್ನಿಸಿದೆ.

‘ಆ ಕಟ್ಟಡದಲ್ಲಿ ಸಿಸಿ ಕ್ಯಾಮೆರಾ ಇಲ್ಲ. ತಕ್ಷಣ ಹಾಕಿಸಲು ಸೂಚನೆ ನೀಡಿದ್ದೇನೆ. ಎದುರಿನ ಹಾಗೂ ಹಿಂಭಾಗದ ಕಟ್ಟಡಗಳಲ್ಲಿ ಸಿಸಿ ಕ್ಯಾಮೆರಾಗಳಿದ್ದರೂ, ಅದರಲ್ಲಿ ತಾರಸಿಯ ಬಲಭಾಗವಷ್ಟೇ ಕಾಣಿಸುವುದು. ಹಾಗಾಗಿ ಅವುಗಳಿಂದ ಉಪಯೋಗವಿಲ್ಲ. ಪಕ್ಕದ ಕೊಡವ ಸಮಾಜದ ಕಟ್ಟಡದಲ್ಲಿ ಸಿಸಿ ಕ್ಯಾಮೆರಾ ಇದೇ ದಿಕ್ಕಿಗೆ ಇದ್ದರೂ, ಅದರ ಮುಖ ತುಸು ಬೇರೆ ಕಡೆಗಿದೆ.’ ಪ್ರವೀಣನ ಜೇಬಿನಲ್ಲಿ ದೊರಕಿದ್ದ ವಸ್ತುಗಳನ್ನು ಲಕೋಟೆಯಲ್ಲಿ ಜೋಡಿಸಿಟ್ಟಿದ್ದರು. ಒಂದು ಪೆನ್ನು, ಎಸ್ಸ್ ಬ್ಲಾಕ್ ಸಿಗರೇಟು ಪ್ಯಾಕು, ಲೈಟರ್, ಮೊಬೈಲ್, ಸ್ವಲ್ಪ ಹಣವಿದ್ದ ಪರ್ಸ್, ಯಾವುದೋ ವಿಸಿಟಿಂಗ್ ಕಾರ್ಡುಗಳು. ಜೊತೆಗೆ ತಮ್ಮಯ್ಯನ ಮೊಬೈಲೂ ಇತ್ತು. ಅವುಗಳನ್ನು ಕರಮಚಂದ ಆಸ್ಥೆಯಿಂದ ಪರಿಶೀಲಿಸಿದ.

* * *

ಆ ದಿನ ಸಂಜೆಯ ವೇಳೆಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಪ್ರಮುಖ ವ್ಯಕ್ತಿಗಳ ಭೇಟಿ ಮುಗಿದಿತ್ತು. ಮೊದಲನೆಯಾಕೆ ಬಡುವಂಡ ತ್ರಿಶಾಲಿ. ಆಕೆಯ ಹೇಳಿಕೆಯಂತೆ, ಪ್ರವೀಣನನ್ನು ಆಕೆ ತ್ಯಜಿಸಲು ಮುಖ್ಯ ಕಾರಣ ಆತನ ಕುಡಿತ ಹಾಗೂ ಧೂಮಪಾನ. ತಮ್ಮಯ್ಯನೊಂದಿಗೆ ಪ್ರವೀಣನಿಗಿದ್ದ ಹಣದ ವ್ಯವಹಾರದ ಬಗ್ಗೆ ಆಕೆಗೆ ಮಾಹಿತಿ ಇರಲಿಲ್ಲ. ಆಕೆಯ ಅಭಿಪ್ರಾಯದಂತೆ, ತಮ್ಮಯ್ಯ ನೇರ ನುಡಿಯ ಆಸಾಮಿ. ಸ್ವಲ್ಪ ಜಿಪುಣನಾದರೂ, ಪ್ರಾಮಾಣಿಕ ವ್ಯಕ್ತಿ. ತಮಾಷೆಯೆಂದರೆ ಆಕೆಗೆ ತಮ್ಮಯ್ಯನ ಪರಿಚಯವಾಗಿದ್ದು ಪ್ರವೀಣನಿಂದಲೇ! ಆಕೆಯ ಪ್ರಕಾರ, ತಮ್ಮಯ್ಯ ಕೊಲೆ ಮಾಡುವಂತಹವನಲ್ಲ. ಆಕೆ ಕೊನೆಯ ಬಾರಿಗೆ ತಮ್ಮಯ್ಯನನ್ನು ಭೇಟಿಯಾಗಿದ್ದು ಪ್ರವೀಣನ ಸಾವಿನ ದಿನ ಮಧ್ಯಾಹ್ನ ಎರಡರ ಹೊತ್ತಿಗೆ. ಇಬ್ಬರೂ ಹೊಟೇಲಿನಲ್ಲಿ ಊಟ ಮಾಡಿದ್ದರು.

ಪ್ರವೀಣ ಕುಡುಕನೆನ್ನುವ ತ್ರಿಶಾಲಿಯ ಹೇಳಿಕೆಯನ್ನು ವಸಂತ ಮುತ್ತಪ್ಪ ಸಮರ್ಥಿಸಿದ. ಆತ ನಾವು ಭೇಟಿಯಾದ ಎರಡನೆಯ ಆಸಾಮಿ. ತಮ್ಮಯ್ಯ ಕೊಲೆ ಮಾಡುವಂತಹ ಕಟುಕನಲ್ಲದಿದ್ದರೂ, ಹೊಡೆದಾಟದಲ್ಲಿ ಆಕಸ್ಮಿಕವಾಗಿ ಪ್ರವೀಣ ಕೆಳಕ್ಕೆ ಬಿದ್ದಿರುವ ಸಾಧ್ಯತೆಯಿದೆ ಅನ್ನುವುದು ಮುತ್ತಪ್ಪನ ವಾದ. ತಮ್ಮಯ್ಯ ಮಾಡಿದ್ದನೆನ್ನಲಾದ ಮೋಸದ ಬಗ್ಗೆಯೂ ಒಂದಿಷ್ಟು ಮಾಹಿತಿ ದೊರಕಿತು. ಅವರು ವಾಹನ ಬಿಡಿಭಾಗಗಳ ರಖಂ ಮಾರಾಟ ಮಾಡುತ್ತಿದ್ದು, ಅನೇಕ ವರ್ತಕರಿಂದ ಹಣ ಬರಲು ಬಾಕಿಯಿತ್ತು. ಅದರ ವಸೂಲಾತಿಯ ಜವಾಬ್ದಾರಿ ತಮ್ಮಯ್ಯನದ್ದಾಗಿತ್ತು. ಆತ ಪ್ರವೀಣನಿಗೆ ಗೊತ್ತೇ ಆಗದಂತೆ ನಗದಿನಲ್ಲಿ ಹಣ ವಸೂಲು ಮಾಡಿ, ಒಂದು ದಿನ ಹಠಾತ್ತಾಗಿ ಪಾಲುದಾರಿಕೆಯಿಂದ ಹೊರಬಂದನಂತೆ. ವರ್ತಕರಲ್ಲಿ ಹಣ ಬಾಕಿ ಕೇಳಲು ಪ್ರವೀಣ ಹೋದಾಗಲಷ್ಟೇ ತಮ್ಮಯ್ಯ ಮಾಡಿದ ಮೋಸದ ಅರಿವಾದದ್ದಂತೆ. ಆದರೆ ತಮ್ಮ ನಡುವಿನ ಜಗಳದ ಲಾಭವನ್ನು ವರ್ತಕರು ಪಡೆದು, ಹಣ ಪಾವತಿಸಿದ್ದೇವೆಂದು ಸುಳ್ಳು ಹೇಳುತ್ತಿದ್ದು, ತಾನು ಅದಕ್ಕೆ ಜವಾಬ್ದಾರನಲ್ಲವೆಂಬುದು ತಮ್ಮಯ್ಯನ ಸಮರ್ಥನೆ. ಈ ಘಟನೆಯ ನಂತರ ಪ್ರವೀಣನ ಕುಡಿತ ಜಾಸ್ತಿಯಾಗಿ, ವ್ಯಾಪಾರವೂ ಕುಸಿದು, ಆತ ಖಿನ್ನತೆಗೆ ಒಳಗಾಗಿದ್ದನಂತೆ. ರಾತ್ರಿಯ ಊಟದ ವೇಳೆಯಲ್ಲಿ ಕರಮಚಂದ ಪ್ರಶ್ನಿಸಿದ, ‘ಏನಾದರೂ ನಿರ್ಧಾರಕ್ಕೆ ಬಂದೆಯಾ, ಬಿದ್ದಪ್ಪ?’ ‘ತಮ್ಮಯ್ಯ ಜೈಲು ಸೇರುವುದು ಗ್ಯಾರಂಟಿ. ಒಂದೋ, ನೇರವಾಗಿ ಕೊಲೆ. ಇಲ್ಲವೇ, ಆತ್ಮಹತ್ಯೆಗೆ ಪ್ರಚೋದನೆ’.

‘ಪ್ರೇಯಸಿ ಕೈಕೊಟ್ಟರೆ ಅದಕ್ಕೆ ಆಕೆಯ ಪ್ರಿಯಕರನ ಮೇಲೆ ಆತ್ಮಹತ್ಯೆಗೆ ಪ್ರಚೋದನೆಯ ಕೇಸು ಹೇಗೆ ಹಾಕುವುದು? ಇನ್ನು, ವ್ಯಾಪಾರದಲ್ಲಿ ಮೋಸ! ಅದಕ್ಕೆ ಸಾಕ್ಷಿಯೇನೂ ಇದ್ದಂತಿಲ್ಲ. ಹಾಗಿದ್ದೂ, ವಂಚನೆ ಮಾಡಿದ್ದು ನಿಜವಾದರೆ, ಸೆಕ್ಷನ್ 420 ರಲ್ಲಿ ಕೇಸು ಹಾಕ್ಬೇಕು.’

‘ಅಷ್ಟು ಸರಳವಾಗಿಲ್ಲ. ತೀವ್ರ ಹಣಕಾಸು ಮುಗ್ಗಟ್ಟಿಗೆ ಸಿಲುಕಿದಾಗ, ವ್ಯಕ್ತಿಗೆ ಆತ್ಮಹತ್ಯೆಯ ಯೋಚನೆ ಬರುವುದು ಸ್ವಾಭಾವಿಕ. ಇನ್ನೊಂದು ಗೊಂದಲ ನೋಡು. ತಮ್ಮಯ್ಯನ ಹೇಳಿಕೆಯಂತೆ, ಆ ರಾತ್ರಿ ಭೇಟಿಯಾಗುವ ಎಂದು ಸಂದೇಶ ಕಳಿಸಿದ್ದು ಪ್ರವೀಣ.